## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶೃಂಗೇರಿ

ಸಿ.ಸಿ. ನಂಃ92/2023

**ಫಿರ್ಯಾದುದಾರರು :** ಸುಬ್ರಮಣ್ಯ ವಿ.ಆರ್,
ಬಿನ್. ದಿವಂಗತ ರಂಗಯ್ಯ,
ವಯಸು ಸುಮಾರು 46 ವರ್ಷ,
ವಾಸಃ ಹೊಸೂರು,
ಕುಂಚೇಬೈಲು ಅಂಚೆ,
ಕುಂತೂರು ಗ್ರಾಮ,
ಶೃಂಗೇರಿ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

**ಃವಿರುದ್ಧಃ**

**ಆರೋಪಿ ಃ** ಸುಂದರೇಶ ಹೆಚ್.ಸಿ,
ಬಿನ್. ದಿವಂಗತ ಚಾಮಿ,
ವಯಸ್ಸು ಸುಮಾರು 48 ವರ್ಷ,
ವಾಸಃ ಅಡಿಗೆ ಬೈಲು,
ಹಿರೇಗದ್ದೆ ಅಂಚೆ,
ಕೊಪ್ಪ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

*****

### ಆ ಪಾ ದ ನೆ

ಆರೋಪಿಯಾದ ನಿಮ್ಮ ವಿರುದ್ಧ ಫಿರ್ಯಾದುದಾರರು ದಾಖಲು ಮಾಡಿರುವ ಫಿರ್ಯಾದು ಏನೆಂದರೆ, ಫಿರ್ಯಾದುದಾರರು ಹಾಗೂ ಆರೋಪಿಯಾದ ನೀವು ಪರಿಚಯಸ್ಥರಾಗಿದ್ದು ನೀವು ಫಿರ್ಯಾದುದಾರರಿಂದ ನಿಮ್ಮ ತರಕಾರಿ ವ್ಯಾಪಾರ ಮಾಡಲು ಹಣದ ಅವಶ್ಯಕತೆ ಇರುವುದಾಗಿ ಹೇಳಿ ಪಿರ್ಯಾದುದಾರರಿಂದ ದಿನಾಂಕಃ30-12-2022 ರಂದು ನಗದಾಗಿ ರೂ.1,00,000-00 ಗಳನ್ನು ಆರೋಪಿಯಾದ ನೀವು ನಗದಾಗಿ ತೆಗೆದುಕೊಂಡಿದ್ದು ಸದರಿ ಹಣವನ್ನು ಮಾರುಪಾವತಿ ಮಾಡಲು ದಿನಾಂಕಃ30-12-2022 ರಂದು ದಿನಾಂಕಃ30-01-2023 ರ ದಿನಾಂಕವನ್ನು ನಮೂದಿಸಿದ ಕರ್ನಾಟಕ ಗ್ರಾಮೀಣ ಬ್ಯಾಂಕ್, ಜಯಪುರ ಶಾಖೆಗೆ ಸಂಬಂಧಿಸಿದ ಚೆಕ್ ನಂ.055805 ಅನ್ನು (ಖಾತೆ ನಂ.12302100002187) ರೂ.1,00,000-00 ಗಳಿಗೆ ನೀಡಿರುತ್ತೀರಿ. ಫಿರ್ಯಾದುದಾರರು ನೀವು ಕೊಟ್ಟ ಚೆಕ್ಕನ್ನು ಜಮಾವಣೆಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ,

ಕುಂಚೇಬೈಲು ಶಾಖೆಗೆ, ಶೃಂಗೇರಿ ತಾಲ್ಲೂಕುಗೆ ಹಾಜರುಪಡಿಸಿದಾಗ, ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂಬ ಹಿಂಬರಹದೊಂದಿಗೆ ದಿನಾಂಕಃ 01-02-2023 ರಂದು ವಾಪಸ್ಸು ಮಾಡಿರುತ್ತಾರೆ ಹಾಗೂ ಈ ಬಗ್ಗೆ ನಿಮಗೆ ವಕೀಲರ ಮೂಲಕ ದಿನಾಂಕಃ22-02-2023 ರಂದು ನೋಟಿಸನ್ನು ನೀಡಿ, ಸದರಿ ನೋಟಿಸ್ ತಲುಪಿದ 15 ದಿನಗಳೊಳಗೆ ಹಣ ಮರುಪಾವತಿ ಮಾಡಬೇಕೆಂದು ತಿಳಿಸಿದರೂ ಸಹ ನೀವು ಆರೋಪಿ ಸದರಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ನೀವು ಆರೋಪಿ ಫಿರ್ಯಾದುದಾರರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಈ ರೀತಿಯ ಚೆಕ್ಕನ್ನು ನೀಡಿ ವರ್ಗಾವಣೆಯ ಲಿಖಿತ ಕಾಯ್ದೆ ಕಲಂ 138 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಪ್ರಶ್ನೆ 1 ಃ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?
ಉತ್ತರ ಃ ಅರ್ಥವಾಗಿದೆ

ಪ್ರಶ್ನೆ2 ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ ವಿಚಾರಣೆಯಾಗಬೇಕು

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.
ದಿನಾಂಕ ಃ

(ದಾಸರಿ ಕ್ರಾಂತಿ ಕಿರಣ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶೃಂಗೇರಿ.

ಆರೋಪಿಯ ಸಹಿಃ